ಚಿಕ್ಕಬಳ್ಳಾಪುರದಿಂದ ಹೊಸಕೋಟೆಗೆ ಕ,ರಾ.ರ.ಸಾ. ಸಂಸ್ಥೆ ಬಸ್ಸುಗಳ ಓಡಾಟ.

೮೯೬. ಶ್ರೀ ಪಿ. ಸಿ. ಮುನಿಸ್ವಾಮಯ್ಯ(ದೇವನ ಹಳ್ಳಿ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಬಳ್ಳಾಪುರ ಮತ್ತು ಹೊಸಕೋಟೆ ಮಧ್ಯ ಳ ಸುತ್ತುಗಳ ಸಾಮಾನ್ಯ ವಾಹನಗಳ ಸಂಚಾರ ವ್ಯವಸ್ಥೆಯ ಬಗ್ಗೆ ನಂದಿ, ಕರ್ಲಳ್ಳಿ, ದೇವನಹಳ್ಳಿ ಮತ್ತು ಬೂದಿಗೆರೆ ಗ್ರಾಮಗಳ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಪ್ರತಿಭಟಿಸಿತ್ತಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಸರ್ಕಾರವು ತಕ್ಷಣ ಸಾಮಾನ್ಯ ವಾಹನಗಳನ್ನು ಓಡಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಸಿದ್ಧರಾಮಯ್ಯ(ಸಾರಿಗೆ ಮಂತ್ರಿಗಳು).—

ಅ) ಇಲ್ಲ

ಆ) ಅಗತ್ಯ ಕಂಡು ಬಂದಲ್ಲಿ, ಹೆಚ್ಚಿನ ಟ್ರಿಪ್ಪುಗಳನ್ನು ಓಡಿಸಲಾಗುವುದು.

ಯಾದವಾಡದಲ್ಲಿರುವ ಪಶುವೈದ್ಯ ಆಸ್ಪತ್ರೆ.

೮೯೭. ಶ್ರೀ ಆರ್. ಎಂ. ಪಾಟೀಲ (ಆರಭಾವಿ).—ಮಾನ್ಯ ರೇಷ್ಮೆ ವ್ಯವಸಾಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯಾದವಾಡದಲ್ಲಿ ಪಶುವೈದ್ಯ ಆಸ್ಪತ್ರೆ ಇರುವುದೆ ?

ಆ) ಸದರಿ ಆಸ್ಪತ್ರೆಯಲ್ಲಿ ಪಶುವೈದ್ಯರು ಇರುವರೆ ?

ಇ) ಪಶುವೈದ್ಯರು ಇರದೇ ಇದ್ದಲ್ಲಿ ಆ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಕೃಷ್ಣ(ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಅ) ಇದೆ.

ಆ) ಇಲ್ಲ.

ಇ) ಯಾದವಾಡ ಪಶುವೈದ್ಯ ಶಾಲೆಯ ಪಶುವೈದ್ಯರ ಹುದ್ದೆಯನ್ನು ಸ್ಥಳಾಂತರಿಸಿರುವುದರಿಂದ ಅಲ್ಲಿಗೆ ಹೊಸದಾಗಿ ಹುದ್ದೆ ಸೃಷ್ಟಿಯಾಗಬೇಕಾಗಿದೆ. ಹುದ್ದೆ ಸೃಷ್ಟಿಯಾದ ನಂತರ ಭರ್ತಿ ಮಾಡಲಾಗುವುದು.

ಕೋಲಾರ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ಕೋಳಿಗಳ ಉತ್ಪಾದನೆ

೮೯೮. ಶ್ರೀ ಜಿ ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ರೇಷ್ಮೆ ವ್ಯವಸಾಯ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ಮಂಜೂರಾಗಿರುವ ತಾಂತ್ರಿಕ ಹಾಗೂ ಇತರೆ ಸಿಬ್ಬಂದಿಯ ಹುದ್ದೆಗಳ ವಿವರ ಹಾಗೂ ಇವರಿಗೆ ೧೯೮೬-೮೭ ರಿಂದ ೧೯೮೭-೮೮ ರವರೆಗೆ ಪ್ರತಿ ವರ್ಷ ಸಂಬಳ ಮತ್ತು ಪ್ರವಾಸ ಭತ್ಯವಾಗಿ ಆಗಿರುವ ವೆಚ್ಚವೆಷ್ಟು ?

ಆ) ೧೯೮೬-೮೭ ರಿಂದ ೧೯೮೭-೮೮ರ ಹಣಕಾಸಿನ ಸಾಲಿನಲ್ಲಿ ಸದರಿ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ವರ್ಷವಾರು ಸಾಕಲಾದ ಕೋಳಿಗಳ ಸಂಖ್ಯೆ ಮರಿಗಳ ಸಂಖ್ಯೆ ಮತ್ತು ಮೊಟ್ಟೆಗಳ ಸಂಖ್ಯೆ ಎಷ್ಟು?

ಇ) ಸದರಿ ಕೇಂದ್ರದಲ್ಲಿ ೧೯೮೬-೮೭ ರಿಂದ ಕೋಳಿ ಮರಿ ಹಾಗೂ ಮೊಟ್ಟೆ ಮಾರಾಟದಿಂದ ಕೋಳಿ ಗೊಬ್ಬರದಿಂದ ಬಂದ ಒಟ್ಟು ಹಣವೆಷ್ಟು ?

ಈ) ಈ ಕೋಳಿ ಸಾಕಾಣಿಕೆ ಕೇಂದ್ರಕ್ಕೆ ೧೯೮೬-೮೭ ರಿಂದ ೧೯೮೭-೮೮ರ ಹಣಕಾಸಿನ ಸಾಲಿನಲ್ಲಿ ಯೋಜನೆ ಹಾಗೂ ಯೋಜನೇತರ ಬಾಬಿನಲ್ಲಿ ಬಿಡುಗಡೆಯಾದ ಹಣವೆಷ್ಟು ? ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ವೆಚ್ಚ ಮಾಡಲಾಗಿದೆ ?

ಶ್ರೀ ಕೃಷ್ಣ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಆ) ಕೋಲಾರ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ಮಂಜೂರಾದ ಹುದ್ದೆಗಳ ವಿವರ.

ತಾಂತ್ರಿಕ ಸಿಬ್ಬಂದಿಯ ಹುದ್ದೆಗಳು

೧ ಪಶುವೈದ್ಯ ಅಧಿಕಾರಿಗಳು	...	೧
೨ ಪಶುವೈದ್ಯರು	...	೧
೩ ಪಶು ಮೇಲ್ವಿಚಾರಕರು	...	೧
೪ ಪಶು ಪರೀಕ್ಷಕರು	...	೧
	ಒಟ್ಟು	೪

ಇತರೆ ಸಿಬ್ಬಂದಿಯ ಹುದ್ದೆಗಳು

೫ ಬೆರಳಚ್ಚುಗಾರರು	...	೧
೬ ವಾಹನ ಚಾಲಕ	...	೧
೭ 'ಡಿ' ದರ್ಜೆ ನೌಕರರು	...	೫
	ಒಟ್ಟು	೭

ವೆಚ್ಚಗಳು	೧೯೮೬–೮೭	೧೯೮೭–೮೮
೧ ವೇತನ	೧,೬೫,೭೩೭–೧೮	೨,೫೨,೯೪೫-೮೦
೨ ಪ್ರಯಾಣ ಭತ್ಯೆ	೯,೩೩೯–೫೫	೨,೪೦೨–೫೦
ಅ) ೧ ಸಾಕಲಾದ ಕೋಳಿಗಳ ಸಂಖ್ಯೆ	೫,೫೮೨	೨,೧೬೯
೨ ಸಾಕಲಾದ ಮಂಡಿಗಳ ಸಂಖ್ಯೆ	೩,೬೧೦	...
೩ ಮೊಟ್ಟೆಗಳ ಸಂಖ್ಯೆ	೫೯,೫೭೧	೫೭,೭೦೩
ಇ) ೧ ಕೋಳಿಗಳಿಂದ ಬಂದ ಹಣ	೬೪,೨೧೨–೫೦	೫೪,೦೭೩–೦೦
೨ ಮೊಟ್ಟೆಗಳಿಂದ ಬಂದ ಹಣ	೨೨,೭೪೭–೦೬	೨೨,೫೩೬–೪೨
೩ ಗೊಬ್ಬರದಿಂದ ಬಂದ ಹಣ	೭೦೦–೦೦	೪೦೨–೦೦
ಈ) ೧ ಯೋಜನೆ	ಇಲ್ಲ	ಇಲ್ಲ
೨ ಯೋಜನೇತರ ಶೀರ್ಷಿಕೆಯಲ್ಲಿ ಬಿಡುಗಡೆ ಆದ ಪಂಟನ	೯೩,೫೪೦–೦೦	೨,೯೮,೦೩೫–೪೫
೩ ವೆಚ್ಚ	೮೪,೯೫೮–೧೫	೪೨,೬೮೭–೧೫ (ಸಾಧಿಲ್ವಾರು) ೨,೫೫,೫೪೮–೩೦ (ವೇತನ ಇತ್ಯಾದಿ)